ದೊಡ್ಡ ಸಮಸ್ಯೆಯಾಗಿರುವುದರಿಂದ ತಮ್ಮ ಸಲಹೆ ಮೇರೆ ಇನ್ನು ಮೂರು ನಾಲ್ಕು ದಿವಸಗಳೊಳಗೆ ಕೋಲಾರ ಮತ್ತು ತುಮಕೂರು ಹಾಗೂ ರಾಜ್ಯದಲ್ಲಿಎಲ್ಲೆಲ್ಲಿ ಈ ರೀತಿ ಆಗಿದೆ, ಆ ಎಲ್ಲಾ ಸಂಬಂಧಪಟ್ಟಂತಹ ಶಾಸಕರುಗಳನ್ನು, ಅಧಿಕಾರಿಗಳನ್ನು ಕರೆಸಿ ಮೀಟಿಂಗ್ ಮಾಡಿ ಯೋಗ್ಯವಾದಂತಹ ಕ್ರಮವನ್ನು ತೆಗೆದುಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತೇನೆ.

ಬಾಗಲಕೋಟೆ ಜಿಲ್ಲೆಯಲ್ಲಿ ರಕ್ತ ಮಾಹಿತಿ ಕೇಂದ್ರ ಪ್ರಾರಂಭಿಸುವುದು

24(73) ಶ್ರೀ ಪೂಜಾರ್ ಪಿ.ಹೆಚ್ (ಬಾಗಲಕೋಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ರಕ್ತ ಮಾಹಿತಿ ಕೇಂದ್ರಗಳನ್ನು ಆರಂಭಿಸಲು ಸರ್ಕಾರ ಉದ್ದೇಶಿಸಿದೆಯೇ?

ಆ) ರಕ್ತ ಮಾಹಿತಿ ಕೇಂದ್ರದ ರಚನೆಯ ರೂಪುರೇಷೆಗಳೇನು?

ಇ) ಈ ಕೇಂದ್ರಗಳನ್ನು ಯಾವಾಗಿನಿಂದ ಪ್ರಾರಂಭಿಸಲಾಗುತ್ತದೆ?

ಈ) ಪ್ರಾಯೋಗಿಕವಾಗಿ ಈಗಾಗಲೇ ಎಲ್ಲೆಲ್ಲಿ ಸ್ಥಾಪಿಸಲಾಗಿದೆ? ಇವುಗಳ ಗುರಿ, ಪ್ರಗತಿ ಯಾವ ರೀತಿ ಇದೆ?

ಉ) ಬಾಗಲಕೋಟೆ ಜಿಲ್ಲೆಯಲ್ಲಿ ಈ ಕುರಿತಂತೆ ಹಾಕಿಕೊಂಡಕಾರ್ಯಕ್ರಮಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಪಿ.ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಉತ್ತರವನ್ನು ಬಹಳ ಸೊಗಸಾಗಿ ಕೊಟ್ಟಿದ್ದಾರೆ, ನಾನು ರಾಜ್ಯದ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ರಕ್ತ ಮಾಹಿತಿ ಕೇಂದ್ರಗಳನ್ನು ಆರಂಭಿಸಲು ಸರ್ಕಾರ ಉದ್ದೇಶಿಸಿದೆಯೇ? ಎಂದು ಕೇಳಿದ್ದ ಪ್ರಶ್ನೆಗೆ ಸರ್ಕಾರದಿಂದ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಮತ್ತೆ ಈ ಕೇಂದ್ರದ ರಚನೆಯ ರೂಪುರೇಷೆಗಳ ಬಗ್ಗೆ ಉದ್ಭವಿಸುವುದಿಲ್ಲವೆಂದು ಉತ್ತರಿಸಿದ್ದಾರೆ. ನಾವು ತಿಳಿದುಕೊಂಡಿದ್ದು ಏನಂದರೆ ಜೀವದಾನ ಮಾಡುವಂತಹ ರಕ್ತದ ಬಗ್ಗೆ ಈ ಸರ್ಕಾರದವಾದರೂ ವಿಶೇಷವಾದ ಪ್ರಾಧಾನ್ಯತೆಯನ್ನು ಕೊಡುತ್ತಿದೆ, ತಾಲ್ಲೂಕು ಮಟ್ಟದಲ್ಲಿ ಈ ಕೇಂದ್ರಗಳನ್ನು ತೆರೆಯುವಂತಹ ತೀರ್ಮಾನವನ್ನುಮಾಡಿದೆ ಎಂದು ನಾವು ತಿಳಿದುಕೊಂಡು ಕಳೆದ ವರ್ಷ ಸಂತೋಷವನ್ನು ಪಟ್ಟೆವು. ಹಿಂದೆ ಇದ್ದಂತಹ ಈ ಇಲಾಖಾ ಮಾನ್ಯ ಸಚಿವರು ಆಗಸ್ಟ್ 26ರಂದು ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಅದೇನೆಂದರೆ ರಾಜ್ಯದ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ರಕ್ತ ಲಭ್ಯತೆಯ ಮಾಹಿತಿ ಕೇಂದ್ರಗಳನ್ನು ತೆರೆಯಲು ಸರ್ಕಾರ ಉದ್ದೇಶಿಸಿದೆ ಎಂದು ಹೇಳಿದ್ದಾರೆ. ಪ್ರಥಮ ಹಂತವಾಗಿ ನೂರು ಕೇಂದ್ರಗಳನ್ನು ತೆರೆಯಲು ಉದ್ದೇಶಿಸಿದ್ದು, ಎಲ್ಲಾ ಕೇಂದ್ರಗಳನ್ನು ಸಂಪೂರ್ಣ ಕಂಪ್ಯೂಟರೀಕರಣ ಮಾಡಲಾಗುವುದೆಂದು ಹೇಳಿದರು, ಅಷ್ಟೇ ಅಲ್ಲದೆ ಪ್ರತಿ ಕೇಂದ್ರಗಳಲ್ಲೂ ನಾಲ್ಕು ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಾರೆ,

ಇದಕ್ಕೆ ಬೇಕಾದಂತಹ ಕಟ್ಟಡ, ಶೌಚ್ಯಾಗಾ, ಹಾಗೂ ಸಾಮಾಗ್ರಿಗಳು ಸೇರಿ ಪ್ರತಿ ಕೇಂದ್ರಗಳಲ್ಲೂ 5 ಲಕ್ಷ ರೂಪಾಯಿಗಳ ಅಂದಾಜು ವೆಚ್ಚಣಗಲಿದೆ, ಮತ್ತೆ ಈ ಕೇಂದ್ರಗಳಲ್ಲಿ ಕೆಲಸ ನಿರ್ವಹಿಸಲು ಸಿಬ್ಬಂದಿಗಳಿಗೆ ತರಬೇತಿ ಈಗಾಗಲೇ ಪ್ರಾರಂಭವಾಗಿದೆ ಎಂದು ಹೇಳಿದ್ದಾರೆ. ಏನು ಸ್ವಾಮಿ ಇದರ ಅರ್ಥ ಸರ್ಕಾರಕ್ಕೆ ಏನಾದರೂ ಬ್ಲತ್ತೆ ಇದೆಯೇ? ನಾವು ಎಲ್ಲರೂ ತಿಳಿದುಕೊಳ್ಳುವುದೇನೆಂದರೆ ಒಂದು ಸರ್ಕಾರ ಬದಲಾವಣೆಯಾದಾಗ ಅದರ ಪಾಲಿಸಿ, ಡಿಸಿಷನ್‌ಗಳು, ವ್ಯವಸ್ಥೆಗಳು ಮತ್ತೊಂದು ಸರ್ಕಾರಕ್ಕಿಂತ ಸ್ವಲ್ಪ ಬದಲಾವಣೆಯಾಗುವಂಥಾದ್ದು ಆಗುತ್ತದೆ. ಆದರೆ ಇಲ್ಲಿ ಒಂದೇ ಸರ್ಕಾರದಲ್ಲಿ ಒಂದೇ ವ್ಯವಸ್ಥೆಯಲ್ಲಿ ಕಳೆದ ವರ್ಷ ಇದು ಸಚಿವರು ಹೇಳಿಕೆ ಕೊಟ್ಟಿರುವಂಥಾದ್ದಕ್ಕೆ ವ್ಯತಿರಿಕ್ತವಾಗಿ ಉದ್ಭವಿಸುವುದಿಲ್ಲ, ನಾವು ಮಾಡುವುದಿಲ್ಲವೆಂದು ಹೇಳುವಂಥಾದ್ದು ಸರಿಯಲ್ಲ, ಸರ್ಕಾರದ ಬದ್ಧತೆ ಬೇಕಲ್ಲಾ ಈ ರೀತಿ ಉತ್ತರ ಕೊಟ್ಟರೆ ಹೇಗೆ ಸ್ವಾಮಿ? ಇದರ ಬಗ್ಗೆ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಸ್ಪಷ್ಟನೆ ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸದನದಲ್ಲಿ ಹಿಂದೆ ಈ ಇಲಾಖೆಯ ಸಂಬಂಧಪಟ್ಟಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ತಾವು ದಯವಿಟ್ಟು ಈ ಪ್ರಶ್ನೆಯನ್ನು ತಡೆ ಹಿಡಿದರೆ ಹಿಂದೆ ಕೊಟ್ಟರುವಂತಹ ಉತ್ತರದ ಹಿನ್ನಲೆಯನ್ನು ನಾನೆ ಮತ್ತೊಮ್ಮೆ ಪರಿಶೀಲನೆ ಮಾಡಿ ಹೇಳುತ್ತೇನೆ.

ಅಧ್ಯಕ್ಷರು : ಆಗಲಿ.

ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕಿನಲ್ಲಿ ಖಾಲಿ ಇರತಕ್ಕ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಭರ್ತಿ

25(72) ಶ್ರೀ ನಾಯ್ಕ ಜೆ.ಡಿ (ಭಟ್ಕಳ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕಿಗೆ ಮಂಜೂರಾದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಖ್ಯೆ ಎಷ್ಟು?

2) ಎಷ್ಟು ಹುದ್ದೆಗಳು ಖಾಲಿ ಇವೆ?

3) ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕಿನಲ್ಲಿ ಸಾಕಷ್ಟು ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಖಾಲಿ ಇದ್ದುದರಿಂದ ಹಲವು ಶಾಲೆಗಳು ತೆರೆಯಲಾದ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದಿಯೆ?

4) ಹಾಗಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ಎಂದು ತುಂಬಲಾಗುವುದು?

ಪೊ|| ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು)

1) ಮಂಜೂರಾದ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಭಟ್ಕಳ ತಾಲ್ಲೂಕಿನಲ್ಲಿ ಹೊನ್ನಾವರ ತಾಲ್ಲೂಕಿನಲ್ಲಿ